ಓದುವ ಅಭಿರುಚಿ ಬೆಳೆಸುವ

೪

# ಸಾಹಿತ್ಯ ಮಂಟಪ



ಇಲ್ಲಿನ ಕಥೆ, ಕವನಗಳನ್ನು
ನೀವೂ ಓದಿರಿ; ಬೇರೆಯವರಿಗೂ
ಓದಿ ಹೇಳಿರಿ.

– ಫೋಟೋ: ಸರಸ್ವತಿ ಜೋಶಿ

ಜನವರಿ–ಫೆಬ್ರವರಿ–ಮಾರ್ಚ್ ೨೦೨೫


ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

ಆರಂಭ ಯೋಜನೆ
Arambha 2024-25 Project
is Supported by Many
Individual Donors

# ಸದಾಶಯ

ಪ್ರೀತಿಯ ಮಕ್ಕಳೇ,

ಓದುವ ಅಭಿರುಚಿ ಹೆಚ್ಚಿಸಿಕೊಳ್ಳಲು ಪ್ರೇರಣೆ ನೀಡುವ 'ಸಾಹಿತ್ಯ ಮಂಟಪ' ನಿಮ್ಮ ಕೈಯಲ್ಲಿದೆ. ಇದರಲ್ಲಿ ಸ್ವರಚಿತ ಕಥೆ – ಕವನಗಳು, ಮೂಲ ಇಂಗ್ಲೀಷ್ ಕಥೆಯೊಂದಿಗೆ ಅದರ ಅನುವಾದ ಕೂಡ ಇವೆ.

ನಮ್ಮ ನಮ್ಮ ವ್ಯಕ್ತಿತ್ವವನ್ನು ಸುಂದರವಾಗಿ ಅರಳಿಸುವ ಶಕ್ತಿ ಹೊಂದಿರುವ ಸಾಹಿತ್ಯ ಮಂಟಪವು ನಿಮ್ಮಲ್ಲಿ ಹೊಸ ಆಲೋಚನೆಗಳಿಗೆ ದಾರಿದೀಪವಾಗಲಿ ಎಂಬುದು ನಮ್ಮ ಸದಾಶಯ.

ಪ್ರತಿ ಕಥೆಯ ಕೊನೆಗೆ ಆಕರಗಳನ್ನು ಕೊಡಲಾಗಿದೆ. ಶಿಕ್ಷಕರ ಸಹಾಯದಿಂದ ನಿಮ್ಮ ಶಾಲೆಯ ಗ್ರಂಥಾಲಯಕ್ಕೆ ಆ ಪುಸ್ತಕಗಳನ್ನು ತರಿಸಿಕೊಂಡು ಇನ್ನೂ ಹೆಚ್ಚು ಹೆಚ್ಚು ಓದಲು ಯತ್ನಿಸಿ.

ಸಾಹಿತ್ಯ ಮಂಟಪವನ್ನು ಸವಿದ ಬಳಿಕ ನಿಮ್ಮ ಅಭಿಪ್ರಾಯಗಳನ್ನು ಧ್ವನಿಯೊಂದಿಗೆ ಹಂಚಿಕೊಂಡರೆ ನಮಗೆಲ್ಲಾ ಸಂತಸವಾಗುತ್ತದೆ.

ಧನ್ಯವಾದಗಳೊಂದಿಗೆ...

**– ಧ್ವನಿ ಬಳಗ**

ಈ ಸಲದ

# ಸಾಹಿತ್ಯ ಮಂಟಪದಲ್ಲಿ....


* ಗಾಂಧಿ ಟೋಪಿ

- ಗಾಳಿ ಸತ್ಯನಾರಾಯಣ ಭಟ್ - ೪

* ಕಬಡ್ಡಿ - ರೇಣುಕಾ ಕೋಡಗುಂಟಿ - ೧೨

* ನನ್ನ ತಂದೆಯ ಮುಂಜಾನೆಯ ನಡಿಗೆ - ಡಾ. ಎ.ಪಿ.ಜೆ ಅಬ್ದುಲ್ ಕಲಾಂ - ೨೩

* ಮರಿಸಿಂಹ ಘರ್ಜಿಸುವುದನ್ನು ಕಲಿತುದು - ಅನು: ಸಂಗಮೇಶ ಎಮ್ - ೩೩

* **Little Lion Learns To Roar** - Shreya Sharmain - ೩೭

* ಕವನ: ರೆಕ್ಕೆಯ ಕಟ್ಟಿ ಹಾರುವೆ

– ವೀರೇಶ ಬ. ಕುರಿ – ೪೨



# ಗಾಂಧಿ ಟೋಪಿ

– ಗಾಳಿ ಸತ್ಯನಾರಾಯಣ ಭಟ್,
ಶಿವಮೊಗ್ಗ

ಈಗ ಸುಮಾರು ೫೦ ವರ್ಷದ ಹಿಂದೆ ನಡೆದ ಘಟನೆ. ನಾನು ಮತ್ತು ನನ್ನ ಸ್ನೇಹಿತ ಇಬ್ಬರು ಗೋವಿಂದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಹೋಗುತ್ತಿದ್ದೆವು. ಒಂದು ದಿನ ಮುಖ್ಯಶಿಕ್ಷಕರು ಇದ್ದಕ್ಕಿದಂತೆ ಬಂದು,“ಮಕ್ಕಳೆಲ್ಲರೂ ಶಾಲೆಗೆ ಇನ್ನು ಮುಂದೆ ಯುನಿಪಾರಂ ಜೊತೆ ಗಾಂಧಿ ಟೋಪಿ ಹಾಕ್ಕೊಂಡು ಬರಬೇಕು.” ಎಂದರು. ಸರಿ ಎಂದು ಕೆಲ ಮಕ್ಕಳು

ಗಾಂಧಿಟೋಪಿ ಹೊಲೆಸೋರು ಹೊಲಿಸಿದರು. ಇನ್ನೂ ಕೆಲವರು ರೆಡಿಮೇಡ್ ತಗೊಳರು ತಗೊಂಡರು. ಈಗ ಶಾಲೆಗೆ ಬರುವ ಮಕ್ಕಳಲ್ಲಿ ಯುನಿಫಾರಂ ಜೊತೆ ಗಾಂಧಿಟೋಪಿಯು ಸೇರಿಕೊಂಡಿತು.

ತಿಂಗಳು ಕಳೆದವು ಆಗಸ್ಟ್ ತಿಂಗಳ ಸ್ವಾತಂತ್ರ್ಯೋಸವ ದಿನ ಬಂದೇ ಬಿಟ್ಟಿತು. ಸ್ವಾತಂತ್ರ್ಯೋಸವದ ಹಿಂದಿನ ದಿನ ಶಿಕ್ಷಕರು ಮಕ್ಕಳನ್ನು ಕರೆದು,"ಮಕ್ಕಳೇ ನಾಳೆ ಸ್ವಾತಂತ್ರ್ಯ ದಿನಾಚರಣೆ ಇರುವುದರಿಂದ ನೀವೆಲ್ಲರೂ ಶುಭ್ರವಾದ ಯೂನಿಫಾರಂನಲ್ಲಿ ಬೆಳಗ್ಗೆ ೮ ಗಂಟೆಗೆ ಶಾಲೆಗೆ ಬರಬೇಕು. ಆದ್ದರಿಂದ ಈ ದಿನ ನಿಮಗೆಲ್ಲ ಅರ್ಧದಿನ ರಜೆ ಕೊಡಲಾಗಿದೆ." ಎಂದರು. ನಾನು ಮತ್ತು ನನ್ನ ಗೆಳೆಂಯು ಮುನೆಗೆ ಬಂದು ಯೂನಿಫಾರಂ ಅಂಗಿ ಮುತ್ತು ಟೋಪಿಯನ್ನು ತೊಳೆದು ಒಣಗಿಸಿದೆವು. ಆದರೆ ಚಡ್ಡಿ ಮಾತ್ರ ತೊಳೆಯಲಿಲ್ಲ ಕಾರಣ

ಮಳೆಗಾಲವಾದರಿಂದ ಚಡ್ಡಿ ತೊಳೆದರೆ ಬೇಗ ಒಣಗುವುದಿಲ್ಲವೆಂದು.

ಮರುದಿನ ಬೆಳಗ್ಗೆ ಬೇಗನೆ ಎದ್ದು ನಾನು ಶಾಲೆಗೆ ಹೋಗಲು ಯೂನಿಫಾರಂ ಹಾಕ್ಕೊಂಡು ರೆಡಿಯಾದೆ, ಗೋವಿಂದ ಯಾವಾಗಲೂ ನನ್ನಗಿಂತ ಮೊದಲೇ ರೆಡಿಯಾಗಿ ಶಾಲೆಗೆ ಹೋಗಲು ಬರುವವ. ಆದರೆ ಇವತ್ತು ಇನ್ನು ಬಂದಿಲ್ಲವೆನ್ನುವಷ್ಟರಲ್ಲಿ ದುಸ್..ದುಸ್.. ದುಸಗುಟ್ಟುತ್ತ ಗೋವಿಂದ ಬಂದ. "ಯಾಕೆ ಗೋವಿಂದ ಲೇಟು?" ಎಂದೆ. ಅದಕ್ಕೆ ಅವ,"ಇವತ್ತು ಒಂದು ಪಜೀತಿ ಆಗೋಯ್ತು ಮಾರಾಯ." ಎಂದ. ಆಗ "ಎನೋ ಪಜೀತಿ" ಎಂದೆ. ಅದಕ್ಕೆ ಅವನು "ಸ್ವಲ್ಪ ನನ್ನ ತೋಪಿ ನೋಡು." ಎಂದ. ಟೋಪಿಯ ಒಂದು ಬದಿ ಪ್ಲೇನ್ ದೋಸೆ ತರ ಕೆಂಪಾಗಿ ಸ್ವಲ್ಪ ಕಪ್ಪಾಗಿ ಒಳ್ಳೆ ಸುಟ್ಟ ಹಪ್ಪಳದಂತೆ ಆಗಿತ್ತು. "ಇದು ಹೇಗೊ?" ಎಂದು ಕೇಳಿದೆ. ಅದಕ್ಕೆ

ಅವನು,“ಬೆಳಗ್ಗೆ ಎದ್ದು ಟೋಪಿ ನೋಡಿದೆ, ಟೋಪಿ ದಪ್ಪ ಬಟ್ಟೆ ಆದುದ್ದರಿಂದ ಒಣಗಿರಲಿಲ್ಲ.

ಆಗ ಟೋಪಿಯನ್ನು ಅಡುಗೆಮನೆ ಒಲೆ ಹತ್ತಿರ ಹಿಡಿದುಕೊಂಡು ಒಣಗಿಸುತ್ತಿದ್ದೆ. ಆಗ ಕಣ್ಣಿಗೆ ಬಿದ್ದದ್ದು ದೋಸೆಕಾವಲಿ. ಆಗ ದೋಸೆಕಾವಲಿಯ ಮೇಲೆ ಟೋಪಿ ಇಟ್ಟು ಒಣಗಿಸಿದರೆ ಬೇಗ ಒಣಗುತ್ತದೆ. ಎಂದು ಹಾಗೆ ಮಾಡಿದೆ. ಆಗ ಕಾವಲಿಯಿಂದ ಹೊಗೆ ಬರುವುದನ್ನು ನೋಡಿ ಹೆದರಿ ಟೋಪಿ ತೆಗೆದರೆ ಟೋಪಿ ಹೀಗಾಯಿತು.” ಎಂದ. “ಅದನ್ನೆ ಹೇಗೊ ಹಾಕಿಕೊಂಡು ಬಂದೆ.” ಎಂದೆ.

“ಸರಿ ಶಾಲೆಗೆ ಲೇಟಾಗುತ್ತದೆ.” ಎಂದು ಶಾಲೆಗೆ ಹೋದೆವು ಸ್ವಾತಂತ್ರ್ಯೋಸವ ಕಾರ್ಯಕ್ರಮ ಮುಗಿಸಿದೆವು. ಗುಂಪಿನಲ್ಲಿ ಗೋವಿಂದ

ಎನ್ನುವ ಹಾಗೆ ಕಾರ್ಯಕ್ರಮದಲ್ಲಿ ಯಾರು ಟೋಪಿ ಬಗ್ಗೆ ವಿಚಾರಿಸಲಿಲ್ಲ. ಇದರಿಂದ ಸಮಾಧಾನದ ನಿಟ್ಟುಸಿರುಬಿಟ್ಟ ಗೋವಿಂದ. ಟೋಪಿ ತೆಗೆದು ಚಡ್ಡಿ ಜೇಬಿನಲ್ಲಿಟ್ಟುಕೊಂಡು ಮನೆಯ ಕಡೆ ಹೊರಟ.

ಮನೆಗೆ ಬಂದು ಗೋವಿಂದ ಚಡ್ಡಿ ಜೇಬಿನಿಂದ ಟೋಪಿ ತೆಗೆದರೆ! ಟೋಪಿಯ ಒಂದು ಬದಿ ಹಪ್ಪಳ ಪುಡಿಯಾದಂತೆ ಪುಡಿಯಾಗಿತ್ತು. ಗೋವಿಂದನಿಗೆ ಬಹಳ ದುಃಖವಾಯಿತು. “ಮನೇಲಿ ಹೇಳಿದರೆ ಬೈತಾರೆ. ಇನ್ನು ಶಾಲೆಗೆ ಈ ಟೋಪಿ ಹಾಕ್ಕೊಂಡು ಹೋದರೆ ಶಿಕ್ಷಕರು ಹೊಡಿತ್ತಾರೆ. ಏನು ಮಾಡೊದು?” ಎಂದು ತಲೆ ಕೆಡಿಸಿಕೊಂಡಿರುವಾಗ ಹಜಾರದಲ್ಲಿ ಒಣಹಾಕಿರುವ ಅಪ್ಪನ ಪಂಚೆ ಗೋವಿಂದನ ಕಣ್ಣಿಗೆ ಬಿತ್ತು. ತಕ್ಷಣ ಯಾರಿಗೂ ತಿಳಿಯದ ಹಾಗೆ ಕೂಡುಗೋಲು ತಂದು ಪಂಚೆಯ ತುದಿಯನ್ನು ಸ್ವಲ್ಪ ಕತ್ತರಿಸಿದ. ಹೀಗೆ ಕತ್ತರಿಸಿದ

ಪಂಚೆಯ ತುಂಡನ್ನು ಎರಡು ಮಡಿಕೆ ಮಾಡಿ ಸೂಜಿದಾರದಿಂದ ಟೋಪಿಯ ಹಾಳಾದ ಭಾಗಕ್ಕೆ ಇಟ್ಟು ಹೋಲಿದ. ಈಗ ಟೋಪಿ ಸರಿಯಾಯಿತು. ಏನೋ ದೊಡ್ಡ ಸಾಧನೆ ಮಾಡಿದಂತೆ ಮನಸ್ಸಿನಲ್ಲಿಯೇ ಖುಷಿಯಾದ.

ಮರುದಿನ ಗೋವಿಂದ ಎಂದಿನಂತೆ ಶಾಲೆಗೆ ಹೋದ ನಂತರ ಅವನ ಅಪ್ಪರಾಯರು ಪೇಟೆಗೆ ಹೊರಡಲು ಸಿದ್ಧರಾದರು. ಒಣಹಾಕಿದ ಪಂಚೆ ತಂದು ಉಡಲು ನೋಡಿದಾಗ ಪಂಚೆಯ ತುದಿಭಾಗ ಕಟ್ ಆಗಿತ್ತು. "ಇದು ಹೇಗಾಗಿರಬಹುದು? ಇಲಿ ಕಚ್ಚಿದ್ದರೆ ತುಂಡು ತುಂಡಾಗಿರುತ್ತಿತ್ತು ಹಾಗಾಗಿರಲಿಲ್ಲ. ಇನ್ನು ಮನೆಯಿಂದ ಹೊರಗೆ ಹೋಗುವಾಗ ಬೇಲಿ ದಾಟಿ ಹೋಗಬೇಕು. ಆ ಬೇಲಿಗೂಟಕ್ಕೆ ಸಿಕ್ಕಿ ಹೀಗಾಗಿರಬಹುದೆ? ಅಥವಾ ಬಸ್ ಸ್ಟಾಂಡಿಗೆ ಹೋಗುವಾ ಕಾಡುದಾರಿಯಲ್ಲಿ

ಹೋಗಬೇಕು. ಅಲ್ಲಿ ಮುಳ್ಳಿನ ಗಿಡಕ್ಕೆ ಸಿಕ್ಕಿ ಹೀಗಾಗಿರಬಹುದೆ? ಇಲ್ಲ ಬೇಲಿ ಗೂಟಕ್ಕೂ, ಮುಳ್ಳಿನ ಗಿಡಕ್ಕೂ ಸಿಕ್ಕಿ ಹರಿದರೆ ಪಂಚೆ ತುಂಡಾಗುತ್ತಿರಲಿಲ್ಲ." ಯಾವುದಕ್ಕೂ ಇರಲ್ಲಿ ಎಂದು ರಾಯರು ಬೇಲಿಯಗೂಟಗಳನ್ನು, ಕಾಡಿನದಾರಿಯ ಮುಳ್ಳಿನ ಗಿಡಗಳನ್ನು ನೋಡಿ ಬಂದರು. ಪಂಚೆಯ ತುಂಡು ಎಲ್ಲಿ ಸಿಗಲಿಲ್ಲ. ರಾತ್ರಿಯೆಲ್ಲ ಪಂಚೆಯ ತುಂಡಿನ ಬಗ್ಗೆ ಯೋಚಿಸುತ್ತ ನಿದ್ದೆ ಮಾಡಿದರು.

ಮರುದಿನ ಬೆಳಗ್ಗೆ ರಾಯರು ಪೇಪರ್ ಓದುತ್ತಾ ಕುಳಿತ್ತಿದ್ದರು. ಮಗ ಗೋವಿಂದ ಶಾಲೆಗೆ ರೆಡಿಯಾಗಿ ತಂದೆ ಹತ್ತಿರ ಬಂದು,"ಅಪ್ಪ ಪರೀಕ್ಷಾ ಫೀ ಕಟ್ಟಬೇಕು ಹತ್ತು ರೂಪಾಯಿ ಕೊಡು." ಎಂದು ಕೇಳಿದ. ಆಗ ರಾಯರು ಜೇಬಿನಿಂದ ಹತ್ತು ರೂಪಾಯಿ ತೆಗೆದು ಮಗನ ಕೈಗಿಡುತ್ತಾ ಮಗನನ್ನೊಮ್ಮೆ ನೋಡಿದರು. ಮಗನ ಟೋಪಿಯ ಒಂದು ಬದಿ ಸೈಕಲ್ ಟ್ಯೂಬಿಗೆ

ಪಂಚರ್ ಕಟ್ಟಿದ ಹಾಗೆ ಇದ್ದದ್ದು ನೋಡಿ ರಾಯರಿಗೆ ನಗು ಬಂತು ಏನೂ ಹೇಳಲಿಲ್ಲ. ಸಾಯಂಕಾಲ ಗೋವಿಂದ ಶಾಲೆಯಿಂದ ಮನೆಗೆ ಬಂದ. ಆಗ ರಾಯರು,"ಆ ಪಂಚರ್ ಕಟ್ಟಿದ ಟೋಪಿ ಬಿಸಾಕು, ನಾಳೆಯಿಂದ ಈ ಹೊಸ ಟೋಪಿ ಶಾಲೆಗೆ ಹಾಕ್ಕೊಂಡು ಹೋಗು." ಎಂದರು.

ಗೋವಿಂದನಿಗೆ ತಾನು ಮಾಡಿದ ತಪ್ಪಿನ ಅರಿವಾಗಿ ಪಶ್ಚಾತಾಪದಿಂದ ತಲೆ ತಗ್ಗಿಸಿದ. ಆಗ ಗೋವಿಂದನಿಗೆ,"ಇದೆಲ್ಲ ಹೇಗಾಯಿತು." ಎಂದು ಮನೆಯವರು ಕೇಳಿದರು. ಗೋವಿಂದ ಟೋಪಿಯ ಕಥೆಯನ್ನೆಲ್ಲ ಹೇಳಿದ ಮನೆಯವರೆಲ್ಲ ಕಥೆ ಕೇಳಿ ನಕ್ಕಿದ್ದೋ ನಕ್ಕಿದ್ದು. *

**ಮನ ಮಂಥನ**

* ನಿನಗೂ ನಿನ್ನ ಬಟ್ಟೆಗಳಿಂದ ತೊಂದರೆ ಆಗಿದೆಯೇ? ಆಗಿದ್ದರೆ ಅದನ್ನು ತರಗತಿಯಲ್ಲಿ ಹಂಚಿಕೊ.

# ಕಬಡ್ಡಿ

– ರೇಣುಕಾ ಕೋಡಗುಂಟಿ



ಖೋ..... ಪಾಠಕ್ಕೆ ಪೂರಕ

**"ಹಾ**...ಹು...ಹಂದಿಗೆ ಹೊಡಿತೀನಿ ಗುದಿಗಿ ತಾ ಹಾ... ಹು... ಹಂದಿಗೆ ಹೊಡಿತೀನಿ ಗುದಿಗಿ ತಾ...ಎನ್ನುತ್ತಾ..." ನಾಗ ಎದುರಾಳಿಯ ತಂಡಕ್ಕೆ ಲಗ್ಗೆ ಇಟ್ಟಾಗ, ಎಲ್ಲರೂ ಜೋರಾಗಿ ನಗಲು ಶುರು ಮಾಡಿದರು. ಎಲ್ಲರೂ ಯಾಕೆ ನಗುತ್ತಿದ್ದಾರೆ ಎಂಬುದನ್ನು ಅರಿಯದ ನಾಗ, ಉಸಿರು

ಬಿಟ್ಟರೆ ತಾನು ಔಟ್ ಆಗಿಬಿಡುತ್ತೇನೆಂದು ಉಸಿರು ಬಿಡದಂತೆ, ವಿಚಲಿತನಾಗದೆ 'ಹಾ...ಹು...ಹಂದಿಗೆ ಹೊಡಿತೀನಿ ಗುದಿಗಿ ತಾ...' ಎನ್ನುತ್ತಾ. ಎದುರಾಳಿಯ ತಂಡದಲ್ಲಿ ಒಬ್ಬನನ್ನು ಮುಟ್ಟಿ, ಔಟ್ ಎಂಬಂತೆ ಕೈ ಸನ್ನೆ ಮಾಡುತ್ತಾ, ಗೆರೆ ದಾಟಿ ತನ್ನ ತಂಡದ ಕಡೆಗೆ ಓಡಿಬಂದನು. ಇತ್ತ ತನ್ನ ತಂಡದವರೂ ಕೂಡ ಇವನನ್ನು ನೋಡಿ ನಗುತ್ತಿದ್ದಾರೆ. ಎಲ್ಲರೂ ಹೀಗೇಕೆ ಬಿದ್ದುಬಿದ್ದು ನಗುತ್ತಿದ್ದಾರೆ ಎಂಬುದು ನಾಗನಿಗೆ ಅರ್ಥವೆ ಆಗಲಿಲ್ಲ. ಕೇವಲ ಎರಡು ದಿನಗಳ ಹಿಂದೆಯೇ ಹಳ್ಳಿಯಿಂದ ಬಂದು ಈ ಶಾಲೆಯನ್ನು ಸೇರಿದ ನಾಗನಿಗೆ, ಇನ್ನು ಫ್ರೆಂಡ್ಸ್ ಅಂತ ಯಾರೂ ಇರಲಿಲ್ಲ ಎಲ್ಲರೂ ಹೊಸಬರೆ ಆಗಿದ್ದರು.

ನಾಗ ಒಂದು ಕುಗ್ರಾಮದವನು. ಅಲ್ಲಿ ಕೇವಲ ಐದನೇ ತರಗತಿವರೆಗೆ ಮಾತ್ರ ಶಾಲೆ ಇತ್ತು. ನಗರದ ಶಾಲೆಗೆ ಮತ್ತು ಹಾಸ್ಟೆಲ್‌ನಲ್ಲಿ ಇರಿಸಿ ಓದಿಸುವ ಸಾಮರ್ಥ್ಯ

ಈತನ ತಂದೆಗೆ ಇರಲಿಲ್ಲ. ಹಾಗಾಗಿ ಐದನೇ ತರಗತಿ ಮುಗಿಯುತ್ತಿದ್ದಂತೆ,"ನೀನು ಓದುವುದು ಸಾಕು." ಎಂದ. ಇದನ್ನು ಕಂಡ ನಾಗನ ಶಿಕ್ಷಕರೊಬ್ಬರು ಬಂದು,"ನಿಮ್ಮ ಮಗ ಬುದ್ಧಿವಂತನಿದ್ದಾನೆ. ಅದು ಅಲ್ಲದೆ ಕ್ರೀಡೆಯಲ್ಲಿಯೂ ತುಂಬಾ ಚುರುಕಿದ್ದಾನೆ. ಇವನನ್ನು ಮುಂದೆ ಓದಲು ಕಳುಹಿಸಿ." ಎಂದರು. ಆದರೆ ನಾಗನ ತಂದೆ,"ನಾನು ಬಡವ ಈ ಪರಿಸ್ಥಿತಿಯಲ್ಲಿ ಮುಂದೆ ಓದಿಸಲು ಸಾಧ್ಯವಾಗುವುದಿಲ್ಲ." ಎಂದು ಕಡ್ಡಿ ಮುರಿದಂತೆ ಹೇಳಿಬಿಟ್ಟ.

ದೂರದ ನಗರ ಪ್ರದೇಶದ ಶಾಲೆಯೊಂದರಲ್ಲಿ ಪ್ರಮುಖವಾಗಿ ಕ್ರೀಡೆಗೆ ಆದ್ಯತೆ ನೀಡುತ್ತಾರೆ. ಕ್ರೀಡೆಯ ಜೊತೆಗೆ ಬಡ ಮಕ್ಕಳಿಗೆ ಉಚಿತವಾಗಿ ಹಾಸ್ಟೆಲಿನಲ್ಲಿ ಉಳಿಯಲು ವ್ಯವಸ್ಥೆ ಮಾಡಿ ಓದಿಸುತ್ತಾರೆ. ಎಂಬ ವಿಷಯ ಶಿಕ್ಷಕರಿಗೆ ತಿಳಿದು ಬಂದಿತು. ಕೂಡಲೆ ಈ ವಿಷಯವನ್ನು ನಾಗನ ತಂದೆ ತಾಯಿಗೆ ತಿಳಿಸಿ, ನಾಗನನ್ನು ನಗರ ಪ್ರದೇಶದ

ಶಾಲೆಗೆ ಕಳುಹಿಸಲು ಒಪ್ಪಿಸಿದರು. ತಾವೇ ಆ ಊರಿಗೆ ಹೋಗಿ ನಾಗನ ಅಡ್ಮಿಶನ್ ಮಾಡಿಸಿ, ಹಾಸ್ಟೆಲಿಗೂ ಸೇರಿಸಿ, ಅಲ್ಲಿರುವ ತಮ್ಮ ಪರಿಚಯದ ಶಿಕ್ಷಕರೊಬ್ಬರಿಗೆ ನಾಗನನ್ನು ಪರಿಚಯಿಸಿ,"ಇವನ ಬಗ್ಗೆ ಸ್ವಲ್ಪ ಕಾಳಜಿ ಇರಲಿ." ಎಂದು ಹೇಳಿ ನಾಗನನ್ನು ಬಿಟ್ಟು ಬಂದಿದ್ದರು.

ನಾಗ ನಗರ ಪ್ರದೇಶದ ಆ ದೊಡ್ಡ ಶಾಲೆಯನ್ನು ನೋಡಿ ಆಶ್ಚರ್ಯಪಟ್ಟ ಅಷ್ಟೊಂದು ಮಕ್ಕಳನ್ನು ಅಲ್ಲಿದ್ದದ್ದನ್ನು ಕಂಡು ನಮ್ಮ ರಾಜ್ಯದಲ್ಲಿನ ಎಲ್ಲಾ ಮಕ್ಕಳು ಇಲ್ಲಿಯೇ ಇರಬಹುದೆ? ಎಂದು ತನಗೆ ತಾನೆ ಲೆಕ್ಕ ಹಾಕಿದ್ದ. ನಾಗ ಹುಟ್ಟಿದಾಗಿನಿಂದ ತನ್ನ ಹಳ್ಳಿಯನ್ನು ಬಿಟ್ಟು ಬೇರೆ ಊರಿಗೆ ಹೋದವನಲ್ಲ. ತನ್ನ ಹಳ್ಳಿಯೇ ಅವನ ಪ್ರಪಂಚವಾಗಿತ್ತು. ಶಾಲೆಗೆ ಸೇರಿದ ಮೊದಲ ದಿನ ಯಾರೊಂದಿಗೂ ಮಾತನಾಡಲಿಲ್ಲ ತನ್ನ ಪಾಡಿಗೆ ತಾನು ಇದ್ದ.

ಎರಡು ದಿನಗಳ ನಂತರ ಶಿಕ್ಷಕರೊಬ್ಬರು ಹಾಸ್ಟೆಲ್‌ಗೆ ಬಂದು ಆರನೇ ತರಗತಿ ಹುಡುಗರನೆಲ್ಲ ಆಟದ ಮೈದಾನಕ್ಕೆ ಬರಲು ಹೇಳಿದರು. ಆರನೇ ತರಗತಿಯ ಹುಡುಗರೆಲ್ಲರು ಓಡಿ ಬಂದು ಸಾಲಾಗಿ ನಿಂತರು. ಅದರಲ್ಲಿ ನಾಗನೂ ಇದ್ದನು.

ಆ ಹುಡುಗರಲ್ಲಿ ಕೆಲವರು ಅದೇ ವರ್ಷ ಹೊಸದಾಗಿ ಆ ಶಾಲೆಗೆ ಸೇರಿದ್ದರು. ಇನ್ನು ಕೆಲವರು ಹಳಬರಿದ್ದರು. ಶಿಕ್ಷಕರು ಹುಡುಗರಿಗೆ,"ಮೊದಲಿಗೆ ಎಲ್ಲರು ನಿಮ್ಮ ನಿಮ್ಮ ಹೆಸರನ್ನು ಹೇಳಿ ಪರಿಚಯ ಮಾಡಿಕೊಳ್ಳಿ." ಎಂದು ಹೇಳಿದರು. ನಂತರ ಅವರಲ್ಲಿ ಕೆಲವು ಮಕ್ಕಳನ್ನು ಕಬಡ್ಡಿ ಆಟಕ್ಕೆ, ಇನ್ನೂ ಕೆಲವರನ್ನು ಖೋ, ಖೋ ಆಟಕ್ಕೆ ಆರಿಸಿದರು. ನಾಗನು ಕಬಡ್ಡಿ ಆಟಕ್ಕೆ ಆಯ್ಕೆ ಆದನು. ಅದರಂತೆ ಕಬಡ್ಡಿ ಆಟಕ್ಕೆ ಆಯ್ಕೆ ಆದವರು ಕಬಡ್ಡಿ ಆಡುವ ಸ್ಥಳಕ್ಕೆ ಬಂದರು. ಆಟದ ಶಿಕ್ಷಕರು ಎಲ್ಲಾ ಮಕ್ಕಳಿಗೂ ಆಟದ ಬಗ್ಗೆ ತಿಳಿಸಿ, ಎರಡು ತಂಡಗಳನ್ನು

ಮಾಡಿದರು. ಒಂದು 'ಎ' ತಂಡ ಇನ್ನೊಂದು 'ಬಿ' ತಂಡ. ನಾಗ 'ಎ' ತಂಡದಲ್ಲಿ ಇದ್ದನು. ಎರಡು ತಂಡಗಳು ಕಬಡ್ಡಿ ಆಟದ ಅಂಕಣಕ್ಕೆ ಇಳಿಯಲು ಸಿದ್ಧರಾದರು.

ಆಟ ಪ್ರಾರಂಭಿಸಬೇಕು ಎನ್ನುವಷ್ಟರಲ್ಲಿ ಈ ಶಿಕ್ಷಕರನ್ನು ಹುಡುಕಿಕೊಂಡು ಯಾರೊ ಇಬ್ಬರು ವ್ಯಕ್ತಿಗಳು ಬಂದರು. "ನೀವು ಆಟ ಶುರುಮಾಡಿ ನಾನು ಅವರೊಂದಿಗೆ ಮಾತನಾಡಿ ಬರುವೆ." ಎಂದು ಹೇಳಿ ಶಿಕ್ಷಕರು ಅವರತ್ತ ನಡೆದರು. ಇತ್ತ ಆಟಕ್ಕೆ ಸಿದ್ಧವಾಗಿದ್ದ ಮಕ್ಕಳು ಆಟವನ್ನು ಶುರು ಮಾಡಿದರು. 'ಎ' ತಂಡದ ನಾಯಕ ತಮ್ಮ ತಂಡದವರಿಗೆ,"ಯಾರು ಮೊದಲು ಹೋಗ್ತಿರಾ?" ಎಂದ. ನಾಗ,"ನಾನು ಹೋಗುತ್ತೇನೆ." ಎಂದು ಕೈಯನ್ನು ಎತ್ತಿದ. ಅದಕ್ಕೆ ತಂಡದ ನಾಯಕ,"ಓಕೆ... ನೀನು ಹೋಗು." ಎಂದು ಹೇಳಿ, ನಾಗನನ್ನ ಕಣಕ್ಕೆ ಇಳಿಸಿದ.

'ಬಿ' ತಂಡದ ಅಂಕಣದ ಗೆರೆಯನ್ನು ದಾಟುತ್ತ ನಾಗನು ಕಬಡ್ಡಿ ಕಬಡ್ಡಿ ಎನ್ನುವುದರ ಬದಲಾಗಿ,"ಹಾ...ಹು... ಹಂದಿಗೆ...ಹೊಡಿತಿನಿ ಗುದಿಗಿ ತಾ... ಎಂದಾಗ." ಇದನ್ನು ಎಂದೂ ಕೇಳಿರದ ಅಲ್ಲಿರುವ ಹುಡುಗರಿಗೆ ಇದೆನೋ ವಿಚಿತ್ರವಾಗಿ ಹೇಳುತ್ತಿದ್ದಾನೆಂದು ನಗತೊಡಗಿದರು.

ಇದನ್ನು ಕಂಡು ನಾಗನಿಗೆ ಆಶ್ಚರ್ಯವಾಯಿತು. "ಇವರೇಕೆ ಹೀಗೆ ನನ್ನನ್ನು ನೋಡಿ ನಗುತ್ತಿದ್ದಾರೆ. ನಾನೇನೂ ತಪ್ಪು ಮಾಡಿಲ್ಲವಲ್ಲ." ಎಂದು ಮನಸ್ಸಿನಲ್ಲೆ ಲೆಕ್ಕ ಹಾಕತೊಡಗಿದ. ಅಷ್ಟರಲ್ಲಿ ಹತ್ತಿರಕ್ಕೆ ಬಂದ ಒಬ್ಬ ಹುಡುಗ "ಏನು...ಏನು ಇನ್ನೊಮ್ಮೆ ಹೇಳು." ಎನ್ನುತ್ತಾ ಗಹಗಹಿಸಿ ನಕ್ಕ. ಇವರು ಯಾಕೆ? ನಗುತ್ತಿದ್ದಾರೆ ಎಂಬುದು ನಾಗನಿಗೆ ಗೊತ್ತಾಯಿತು. ಇದರಿಂದ ಅವಮಾನವಾದಂತಾಗಿ ಸಪ್ಪೆ ಮುಖ ಮಾಡಿಕೊಂಡು ತಲೆ ತಗ್ಗಿಸಿಕೊಂಡು

ಅಳುತ್ತಾ ಆಟದ ಅಂಕಣದಿಂದ ಹೊರಕ್ಕೆ ಬಂದನು.

ಅಷ್ಟರಲ್ಲಿ ಶಿಕ್ಷಕರು ಅಲ್ಲಿಗೆ ಬಂದರು. ಶಿಕ್ಷಕರು ಬಂದಾಗ ಎಲ್ಲಾ ಮಕ್ಕಳು ನಗುವುದರಲ್ಲೆ ಮುಳುಗಿದ್ದರು ನಾಗ ಮಾತ್ರ ಅಳುತ್ತಿದ್ದನು. ಇದನ್ನು ಕಂಡ ಶಿಕ್ಷಕರಿಗೆ ಇಲ್ಲಿ ಏನೋ ನಡೆದಿದೆ ಎಂಬ ಅನುಮಾನ ಬಂದಿತು. ಅಲ್ಲಿದ್ದ ಒಬ್ಬ ಹುಡುಗನನ್ನು ಕರೆದು,"ಯಾಕೆ ಎಲರೂ ನಗುತ್ತಿದ್ದಿರಾ? ಅವನೇಕೆ ಅಳುತ್ತಿದ್ದಾನೆ?'' ಎಂದು ಕೇಳಿದರು. ಆ ಹುಡುಗ ನಡೆದ ಘಟನೆಯನ್ನು ವಿವರಿಸಿದನು. ನಗುತ್ತಿದ್ದ ಹುಡುಗರಿಗೆ ಶಿಕ್ಷಕರು,''ಸಾಕು ನಿಲ್ಲಿಸಿ ನಗಬೇಡಿ.'' ಎಂದು ಗದರಿಸಿದರು.

''ನೋಡಿ, ನಾಗ ಗ್ರಾಮೀಣ ಪ್ರದೇಶದಿಂದ ಬಂದಿರುವ ಹುಡುಗ. ಅವನು ತಮ್ಮ ಊರಿನಲ್ಲಿ ಕಬಡ್ಡಿ ಆಡುವಾಗ ಏನನ್ನು ಹೇಳುತ್ತಾರೆೊ ಅದನ್ನೆ ಇಲ್ಲಿಯೂ

ಹೇಳಿದ್ದಾನೆ ಅಷ್ಟೆ. ಅಲ್ಲಿ ಹೇಗೆ ಆಟವಾಡುತ್ತಿದ್ದನೊ ಇಲ್ಲಿಯೂ ಹಾಗೆ ಆಡಿದ್ದಾನೆ. ಅವನು ಈಗ ತಾನೆ ಇಲ್ಲಿ ಸೇರಿದ್ದರಿಂದ ಇಲ್ಲಿಯ ಪರಿಸರ ಅವನಿಗೆ ಹೊಸದು.

ಇಷ್ಟಕ್ಕು ಇವತ್ತು ಅವನು ಕಬಡ್ಡಿ...ಕಬಡ್ಡಿ... ಎನ್ನುವ ಬದಲಾಗಿ ಗ್ರಾಮೀಣ ಭಾಗದಲ್ಲಿ ಕಬಡ್ಡಿ ಆಡುವಾಗ ಬಳಸುವ ಪದಗಳನ್ನೆ ಅವನೂ ಹೇಳಿದ್ದಾನೆ. ಅದರಲ್ಲಿ ತಪ್ಪೇನಿದೆ? ಆಟದ ನಿಯಮವನ್ನು ಅವನು ತಪ್ಪಿಲ್ಲ. ಕಬಡ್ಡಿ ಆಟದಲ್ಲಿ ಉಸಿರು ಬಿಡದಂತೆ ಯಾವುದಾದರು ಒಂದು ಪದವನ್ನು ಹೇಳಬೇಕೆಂಬುವ ರೂಲ್ಸ್ ಇದೆಯೆ ಹೊರತು, ಕಬಡ್ಡಿ...ಕಬಡ್ಡಿ... ಅಂತಾನೆ ಹೇಳಬೇಕೆಂದೇನಿಲ್ಲ. ಇವತ್ತಿಗೂ ಕೂಡ ಗ್ರಾಮೀಣ ಭಾಗದಲ್ಲಿ ನಾಗ ಹೇಳಿದ ರೀತಿ ಅಲ್ಲದೆ, ಇನ್ನೂ ಬೇರೆ ಬೇರೆ ರೀತಿಯ ಪದಗಳನ್ನು ಹೇಳುವುದು ರೂಢಿಯಲ್ಲಿದೆ. ನಿಮಗೆ ಅದರ ಬಗ್ಗೆ ಗೊತ್ತಿಲ್ಲ. ಗ್ರಾಮೀಣ

ಪ್ರದೇಶದ ಆಟವಾದ ಈ ಕಬಡ್ಡಿ ಈಗ ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಳ್ಳುತ್ತಿರುವುದರಿಂದ ಕಬಡ್ಡಿ ಆಟದಲ್ಲಿ ಕಬಡ್ಡಿ...ಕಬಡ್ಡಿ... ಎಂಬ ಪದವನ್ನೆ ಹೇಳಬೇಕೆನ್ನುವ ರೂಡಿಯನ್ನು ಇಟ್ಟುಕೊಂಡಿದ್ದಾರೆ ಅಷ್ಟೆ.

ಗ್ರಾಮೀಣ ಪ್ರದೇಶದ ಅರಿವಿಲ್ಲದ ನೀವು ಹೀಗೆ ಇನ್ನೊಬ್ಬರು ಬಳಸಿದ ಭಾಷೆ ಕೇಳಿ ನಗುವುದು ಸರಿಯಲ್ಲ. ನೀವು ಈ ರೀತಿ ಮಾಡುವುದರಿಂದ ಗ್ರಾಮೀಣ ಭಾಗದ ಹುಡುಗರು ಮುಜುಗರ ಪಟ್ಟುಕೊಂಡು ಓದುವುದನ್ನೆ ಬಿಡುವಂತ ಪರಿಸ್ಥಿತಿ ಉಂಟಾಗುತ್ತದೆ. ಅಳುತ್ತಾ ಕುಳಿತಿದ್ದ ನಾಗನ ಬಳಿ ಹೋಗಿ ಕ್ಷಮೆ ಕೇಳಿ ಕರೆದುಕೊಂಡು ಬನ್ನಿ." ಎಂದು ಹುಡುಗರಿಗೆ ಹೇಳಿದರು. ಎಲ್ಲಾ ಹುಡುಗರು ನಾಗನ ಹತ್ತಿರ ಹೋಗಿ,"ನಾವು ನಕ್ಕಿದ್ದು ತಪ್ಪಾಯಿತು. ನಮ್ಮನ್ನು ಕ್ಷಮಿಸು ಇನ್ನೊಮ್ಮೆ ಹೀಗೆ ಆಗುವುದಿಲ್ಲ. ನಿನಗೆ ಮಾತ್ರವಲ್ಲ ಯಾರಿಗೂ ಕೂಡ ನಾವು ಹೀಗೆ ಮಾಡುವುದಿಲ್ಲ."

ಎಂದರು. ಇವರ ಮಾತುಗಳನ್ನು ಕೇಳಿ ನಾಗನಿಗೆ ಸಮಾಧಾನವಾಯಿತು.

ನಾಗ ಮತ್ತು ಆ ಹುಡುಗರೆಲ್ಲರು ಶಿಕ್ಷಕರ ಬಳಿ ಬಂದರು. ನಾಗನು ಶಿಕ್ಷಕರಿಗೆ ವಂದಿಸಿದನು. ಮತ್ತು ಎಲ್ಲಾ ಹುಡುಗರಿಗೂ ಒಳ್ಳೆಯ ಸ್ನೇಹಿತನಾದನು. ಅಂದಿನಿಂದ ನಾಗನ ನಗರ ಪ್ರದೇಶದ ಶಾಲೆಯ ಜೀವನ ಆರಾಮವಾಗಿ ನಡೆದುಕೊಂಡು ಹೋಯಿತು.

*

**ಆಕರ: ‘ಪಾಟಿಚೀಲ’ ಮಕ್ಕಳ ಕಥಾಸಂಕಲನ**
**ಅವ್ಯಕ್ತ ಪ್ರಕಾಶನ**

**ಮನ ಮಂಥನ:**

* ನೀನು ಶಾಲೆಯ ಯಾವ ಯಾವ ಆಟಗಳಲ್ಲಿ ಭಾಗವಹಿಸಿರುವೆ?
* ನಿನಗೆ ತುಂಬಾ ಇಷ್ಟವಾದ ಆಟಗಳು ಯಾವವು?

# ನನ್ನ ತಂದೆಯ ಮುಂಜಾನೆಯ ನಡಿಗೆ

ಕನಸುಗಾರ ಕಲಾಂ ಪಾಠಕ್ಕೆ ಪೂರಕ

– ಎ.ಪಿ.ಜೆ. ಅಬ್ದುಲ್ ಕಲಾಂ



ಅಬ್ದುಲ್ ಕಲಾಂ, ಎಂದೊಡನೆ ನಮಗೆ ನೆನೆಪಾಗುವುದು ಭಾರತದ ಹನ್ನೊಂದನೆಯ ರಾಷ್ಟ್ರಪತಿ ಡಾ. ಕಲಾಂ. ಹೌದು ಅವರೆ, ಅವರ ಪೂರ್ಣ ಹೆಸರು

ಅವುಲ್ ಫಕೀರ್ ಜೈನುಲಬ್ಬೀನ್ ಅಬ್ದುಲ್ ಕಲಾಂ ಎಂದು. ಅವರು 'ಮದ್ರಾಸ್ ಇನ್ ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ'ಯಲ್ಲಿ ಏರೋನಾಟಿಕಲ್ ಇಂಜಿನಿಯರಿಂಗ್ ಕಲಿತರು. ಡಾ. ಕಲಾಂ ಅವರು ಭಾರತದ ಪ್ರಖ್ಯಾತ ವಿಜ್ಞಾನಿ. ಅವರು ದೇಶ ವಿದೇಶಗಳ ಒಟ್ಟು 45 ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟರೇಟ್ ಪಡೆದಿದ್ದಾರೆ.

ಇದೆಲ್ಲವನ್ನೂ ಸಾಧಿಸಿದ ಈ ಮಹಾನ್ ವ್ಯಕ್ತಿಯ ಜೀವನದಲ್ಲಿ ಅವರ ತಂದೆಯವರ ಪಾತ್ರವು ಬಹಳ ಹಿರಿದಾಗಿದೆ. ಡಾ. ಕಲಾಂ ಅವರಿಗೆ ಅವರ ತಂದೆಯವರು ಬೀರಿದ ಪ್ರಭಾವದ ಬಗ್ಗೆ ಬರೆದಿದ್ದಾರೆ. ಅವರ ಬರವಣಿಗೆಯನ್ನು ಅವರೆದೇ ಮಾತುಗಳಲ್ಲಿ ನಾವೂ ಕೂಡ ಓದಬಹುದಲ್ಲವೆ.

ಬಾಲ್ಯದಿಂದ ಇಲ್ಲಿಯ ತನಕ ನನ್ನ ಜೀವನದ ಕೆಲವು ವಿಶಿಷ್ಟ ಅನುಭವಗಳನ್ನು

ಎಂಬತ್ತು ವರ್ಷ ದಾಟಿದ ಈ ಘಟ್ಟದಲ್ಲಿ ನಾನು 'ನನ್ನ ಪಯಣ'(My Journey)ವೆಂಬ ಕೃತಿಯಲ್ಲಿ ವಿವರಿಸಿದ್ದೇನೆ. ನನಗೆ ನೆನಪಿರುವ ದಿನದಿಂದಲೂ ನಾನು ನೋಡುತ್ತಿದ್ದುದು ನನ್ನ ತಂದೆಯವರು ಬೆಳಿಗ್ಗೆ ನಾಲ್ಕು ಗಂಟೆಗೇ ಏಳುತ್ತಿದ್ದುದನ್ನು. ಮನೆಯಲ್ಲಿ ಮೊದಲು ಏಳುತ್ತಿದ್ದುದು ಅವರೇ. ಅವರು ತಮ್ಮ ಪ್ರಾರ್ಥನೆಯನ್ನು ಹೇಳಿ ನಂತರ ತೆಂಗಿನ ತೋಟದತ್ತ ನಡೆದುಹೋಗುತ್ತಿದ್ದರು. ಅದೊಂದು ಉದ್ದನೆಯ ನಡಿಗೆ.

ನಮ್ಮ ಊರು ತಮಿಳುನಾಡಿನ ಒಂದು ಸಣ್ಣ ದೇವಾಲಯ ಪಟ್ಟಣವಾದ ರಾಮೇಶ್ವರವೆಂಬ ಒಂದು ದ್ವೀಪ. ನಮ್ಮ ಜೀವನದಲ್ಲಿ ಸಮುದ್ರದ ಭೋರ್ಗರೆತದ ಸದ್ದು ಹಾಸುಹೊಕ್ಕಾಗಿದೆ. ನನ್ನ ತಂದೆಯವರಿಗೆ ದೋಣಿ ಸಾರಿಗೆ ವ್ಯವಹಾರ

ಇತ್ತು. ಜತೆಗೆ ನಮ್ಮ ಮನೆಯಿಂದ ನಾಲ್ಕು ಮೈಲು ದೂರದಲ್ಲಿ ನಮಗೊಂದು ಚಿಕ್ಕ ತೆಂಗಿನ ತೋಟವೂ ಇತ್ತು. ನನ್ನ ತಂದೆಯುವರು ಬೆಳ್ಳಂಬೆಳಗ್ಗೆ ಎದ್ದು ಹೋಗುತ್ತಿದ್ದುದು ಅಲ್ಲಿಗೇ.

ದಿನದ ಬೇರೆ ಕೆಲಸಕಾರ್ಯಗಳೆಲ್ಲ ತಮ್ಮ ಬದುಕಿನಲ್ಲಿ ಹೆಚ್ಚಿನ ಆಸ್ತಿ–ಪಾಸ್ತಿ ಗಳಿಸಿದವರೂ ಅಲ್ಲ. ಆದರೆ ನನಗೆ ತಿಳಿದವರಲೆಲ್ಲ ನನ್ನ ತಂದೆಯೇ ತುಂಬ ಬುದ್ಧಿವಂತರೂ ನಿಜವಾದ ಉದಾರಿಯೂ ಆಗಿದ್ದರು. ಆಸುಪಾಸಿನವರು ಅಗತ್ಯದ ಕಾಲದಲ್ಲಿ ನನ್ನ ತಂದೆಯವರ ಬಳಿಗೆ ಸಹಾಯ ಕೇಳಿಕೊಂಡು ಬರುತ್ತಿದ್ದರು.

ಈ ಜನಗಳೆಲ್ಲ ನನ್ನ ತಂದೆಯವರಲ್ಲಿ ಏನನ್ನು ಕಂಡರು? ಅವರು ಧರ್ಮ ಗುರು ಆಗಿರಲಿಲ್ಲ; ಯಾವ ಬಗೆಯ ಗುರುವೂ ಆಗಿರಲಿಲ್ಲ. ತಮ್ಮ ಮನಸ್ಸಾಕ್ಷಿಗೆ

ಅನುಸಾರವಾಗಿ ಹಾಗೂ ತಾವು ಪಾಲಿಸುವ ಧರ್ಮದ ನೀತಿ-ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸುತ್ತ ಬದುಕುತ್ತಿದ್ದ ಒಬ್ಬ ಸಾಮಾನ್ಯ ಮನುಷ್ಯ ಅವರಾಗಿದ್ದರು. ಅವರು ಈ ಜನರಿಗೆ ಏನು ಕೊಡುತ್ತಿದ್ದರು? ನನಗೆ ಈಗ ಅನಿಸುವುದೆಂದರೆ ನನ್ನ ತಂದೆ ಅವರ ಜತೆಗಿದ್ದಾರೆ ಎಂಬುದೇ ಅವರಿಗೆಲ್ಲ ಒಂದು ಭರವಸೆಯಾಗಿತು.

ಪ್ರಾರಂಭವಾಗುವ ಮೊದಲು ನನ್ನ ತಂದೆಯವರು ನಿರ್ಜನವೂ ಶಾಂತವೂ ಆದ ಆ ಓರೆಕೋರೆಯ ರಸ್ತೆಗಳಲ್ಲಿ, ಆ ಚುಮುಚುಮು ಬೆಳಕಿನಲ್ಲಿ ನಡೆದು ಹೋಗುವುದನ್ನು ನಾನು ಕಲ್ಪಿಸಿಕೊಳ್ಳಬಲ್ಲೆ. ಅವರು ಆ ಘಳಿಗೆಯಲ್ಲಿ ನಡೆಯುತ್ತಲೇ ತಮ್ಮ ಪ್ರಾರ್ಥನೆಯನ್ನು ಹೇಳುತ್ತಿದ್ದಿರಬಹುದು; ಅಥವಾ ತಮ್ಮ ಕುಟುಂಬದ ಕ್ಷೇಮಾಭಿವೃದ್ಧಿಯ ಬಗೆಗೆ

ಚಿಂತಿಸುತ್ತಿದ್ದಿರಲೂಬಹುದು.

ಮುಂಜಾವದ ಈ ನಡಿಗೆ ನನ್ನ ತಂದೆಯವರ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಒಂದು ಪಾತ್ರವನ್ನು ವಹಿಸಿತು ಎಂಬುದರಲ್ಲಂತೂ ನನಗೆ ಸಂದೇಹವಿಲ್ಲ; ಅವರ ಆ ಶಾಂತ ಸ್ವಭಾವದಲ್ಲಿ ಆ ಪ್ರಕೃತಿಯೊಂದಿಗಿನ ಸ್ಪಂದನ ಕೊಡುಗೆಯೂ ಇದ್ದಿರಲೇಬೇಕು.

ನನ್ನ ತಂದೆಯವರಿಗೆ ಅಂತಹ ಹೇಳಿಕೊಳ್ಳುವ ಶಾಲಾ ಶಿಕ್ಷಣ ಇರಲಿಲ್ಲ; ಅವರು ತಮ್ಮ ವ್ಯವಹಾರಗಳ ನಡುವೆಯೂ ತಮ್ಮ ಬಳಿ ಬರುವ ಜನರೊಂದಿಗೆ ಮಾತನಾಡುವ, ಅವರಿಗಾಗಿ ಪ್ರಾರ್ಥನೆ ಮಾಡುವ, ಅವರಿಗೆ ಸಾಂತ್ವನ ಹೇಳುವ ತಾಳ್ಮೆಯೂ ಔದಾರ್ಯವೂ ಅವರಿಗೆ ಎಲ್ಲಿಂದ ಬರುತ್ತಿತ್ತು? ಒಮ್ಮೆ ನಾನು ಅವರಲ್ಲಿ 'ಇವರೆಲ್ಲ ನಿಮ್ಮ ಬಳಿ ಯಾಕೆ ಬರುತ್ತಾರೆ,

ನೀವು ಅವರಿಗೆ ಏನು ಸಹಾಯ ಮಾಡುತ್ತೀರಿ?' ಎಂದು ಕೇಳಿದೆ. ಅವರು ಆಗ ನನಗೆ ಕೊಟ್ಟ ಉತ್ತರ ಐದಾರು ದಶಕಗಳ ನಂತರವೂ ನನ್ನ ನೆನಪಿನಲ್ಲಿ ಹಸಿರಾಗಿದೆ.

'ಜನರು ಅಸಹಾಯಕರಾಗಿ ಏಕಾಂಗಿಯಾದಾಗ ಸಹಜವಾಗಿಯೇ ತಮ್ಮ ಕಷ್ಟಗಳನ್ನು ಹೇಳಿಕೊಳ್ಳಲು ಯಾರಾದರೂ ಬೇಕೆಂದು ಬಯಸುತ್ತಾರೆ. ಪ್ರತಿಯೊಂದು ದುಃಖ, ಸಂಕಟ, ಸಮಸ್ಯೆಗೂ, ಆಶೋತ್ತರಕ್ಕೂ ಅದರದ್ದೇ ಆದ ಯಾವುದಾದರೊಂದು ಪರಿಹಾರವಿರುತ್ತದೆ. ಸಂಕಷ್ಟದಲ್ಲಿರುವ ಜನರು ಉಂಟು ಮಾಡುತ್ತವೆ'.

ನನ್ನ ಬದುಕಿನಲ್ಲಿ ಎದುರಾದ ಅನೇಕ ಕಷ್ಟಪರಂಪರೆಗಳನ್ನೂ ಸಮಸ್ಯೆಗಳನ್ನೂ ಎದುರಿಸಲು ನನ್ನೊಳಗಿನಿಂದಲೇ ಶಕ್ತಿಯನ್ನು

ಪಡೆಯುವುದಕ್ಕೆ ನನ್ನ ತಂದೆಯ ಈ ಮಾತುಗಳು ನನಗೆ ಸಹಾಯ ಮಾಡಿದವು.

ನನಗೆ ಈಗ ಎಂಭತ್ತೆರಡು ವರ್ಷ. ಅವರಂತೆ ನನ್ನ ದಿನವೂ ಸಹಾ ಈಗಲೂ ಮುಂಜಾನೆಯ ನಡಿಗೆಯೊಂದಿಗೆ ಪ್ರಾರಂಭವಾಗುತ್ತದೆ. ಪ್ರತಿ ಮುಂಜಾನೆಯೂ ನಾನು ಉದಯಿಸುವ ಸೂರ್ಯನನ್ನೂ, ಸೂರ್ಯೋದಯಕ್ಕೆ ಮೊದಲಿನ ಉಷಃಕಾಲದ ಆ ಮುಸುಕು-ಮುಸುಕು ಬೆಳಕನ್ನೂ ತಂಪಾದ ಗಾಳಿಯನ್ನೂ ಕಿವಿಗೆ ತಂಪೆರೆಯುವ ಹಕ್ಕಿಗಳ ಚಿಲಿಪಿಲಿಯನ್ನೂ ಆಸ್ವಾದಿಸುತ್ತೇನೆ.

ಜೀವನವು ನನ್ನನ್ನು ಎಲ್ಲೆಲ್ಲಿ ಕೊಂಡೊಯ್ದಿತೋ ಅಲ್ಲೆಲ್ಲವೂ ನಾನು ನಡೆದೆ; ಆಗೆಲ್ಲ ನನಗೆ ನನ್ನ ತಂದೆ ಜೈನುಲಬ್ದೀನರದ್ದೇ ನನ್ನ ಬಳಿ ಬರುತ್ತಾರೆ. ತಮ್ಮನ್ನು ಬಾಧಿಸುವ ಭೂತ-ಪ್ರೇತಗಳನ್ನು

ಉಚ್ಚಾಟನೆ ಮಾಡಲು ನನ್ನ ಪ್ರಾರ್ಥನೆಯಿಂದ ಸಾಧ್ಯವೆಂದು ನಂಬಿ ನನ್ನ ಬಳಿ ಬರುತ್ತಾರೆ’.

ಇಷ್ಟು ಹೇಳಿದ ನನ್ನ ತಂದೆಯವರು ನನಗೆ ಪ್ರಾರ್ಥನೆಯಲ್ಲಿ ಇರುವ ಶಕ್ತಿಯ ಬಗ್ಗೆ ಹೇಳಿದರು. ವಿಜ್ಞಾನದ ಕ್ಷೇತ್ರದಲ್ಲಿ ಅನೇಕ ವರ್ಷಕಾಲ ಕೆಲಸ ಮಾಡಿದ ಮೇಲೂ ನನಗೆ ತಂದೆಯವರ ಮಾತು ನನ್ನ ಕಿವಿಯಲ್ಲಿ ಗಂಟೆಯಂತೆ ಬಾರಿಸುತ್ತದೆ. ‘ಯಾವ ಸಮಸ್ಯೆಗೂ ಹೊರಗೆ ಪರಿಹಾರ ಹುಡುಕಬೇಡ.’ ಎಂದು ಅವರು ನನಗೆ ಹೇಳಿದರು. ‘ವಿಧಿಯ ಬಗ್ಗೆ ಭಯವನ್ನೂ ಸಿದ್ಧಿಗೆ ಅಡ್ಡಿಯುಂಟು ಮಾಡುವ ಶತ್ರುವನ್ನೂ ಬೇರೆಲ್ಲೂ ಹುಡುಕುವುದು ಬೇಡ. ಕಷ್ಟಗಳು ಬಂದಾಗ ನಿನ್ನ ನೋವು–ನರಳಿಕೆಗಳ ಕಾರಣ ಏನು ಎಂದು ಶೋಧಿಸು. ಎಡರು–ತೊಡರುಗಳು

ಯಾವಾಗಲೂ ಆತ್ಮಾವಲೋಕನಕ್ಕೆ ಅವಕಾಶ ನೆನಪು. ನನ್ನ ಅಂತಃಚಕ್ಷುವಿನಲ್ಲಿ ನಾನು ನನ್ನ ತಂದೆ ಸದಾ ನಡೆಯುತ್ತಿರುವುದನ್ನೇ ಕಲ್ಪಿಸಿಕೊಳ್ಳಬಲ್ಲೆ. ಅವರು ತುಂಬಾ ವೃದ್ಧಾಪ್ಯದಲ್ಲಿಯೂ ಪ್ರತಿದಿನವೂ ತಮ್ಮ ತೆಂಗಿನ ತೋಟಕ್ಕೆ ನಡೆದೇ ಹೋಗುತ್ತಿದ್ದರು.

*

**ಆಕರ: ನನ್ನ ಪಯಣ**
**ಅನುವಾದ: ಜಿ.ಕೆ. ಮಧ್ಯಸ್ಥ**

**ಮನ ಮಂಥನ**

* ನಿನ್ನ ತಂದೆಯವರ ಬಾಲ್ಯ ಜೀವನದ ಬಗ್ಗೆ ನಿನಗೆ ಗೊತ್ತಾ? ಗೊತ್ತಿಲ್ಲದಿದ್ದರೇ ಕೇಳಿ ತಿಳಿ. ಸಾಧ್ಯವಾದರೆ ಅದನ್ನು ಬರೆಯಲು ಪ್ರಯತ್ನಿಸು.

‘Little Lion Learns To Roar’ ಇಂಗ್ಲಿಷ್ ಕಥೆಯ ಕನ್ನಡ ಅನುವಾದ

# ಮರಿಸಿಂಹ ಘರ್ಜಿಸುವುದನ್ನು ಕಲಿತುದು

ಅನುವಾದ: ಸಂಗಮೇಶ ಎಮ್.
ಧ್ವನಿ ಬಳಗ

ಕಾಡಿನಲ್ಲೊಂದು ಸ್ಪರ್ಧೆ ಪಾಠಕ್ಕೆ ಪೂರಕ



ಒಂದು ದಟ್ಟವಾದ ಕಾಡಿನಲ್ಲಿ ಒಂದು ಸಿಂಹರಾಜ ತನ್ನ ಹೆಂಡತಿ ಮತ್ತು ಮುದ್ದಾದ ಮಗನೊಂದಿಗೆ ವಾಸಿಸುತ್ತಿದ್ದನು. ಸಿಂಹರಾಜ ತನ್ನ ಮಗನನ್ನು ತುಂಬಾ ಪ್ರೀತಿಸುತ್ತಿದ್ದ. ತನ್ನ ಮಗನೇ ಕಾಡಿನ ರಾಜನಾಗಬೇಕೆಂದು ಬಯಸಿದ್ದನು. “ಮಗನೇ, ಒಳ್ಳೆಯ ರಾಜನಿಗೆ ಘರ್ಜನೆಯೇ

ಅತ್ಯಂತ ಮುಖ್ಯವಾದದ್ದು. ನೀನು ಘರ್ಜಿಸುವುದನ್ನು ಕಲಿಯಬೇಕು." ಎಂದು ಸಿಂಹರಾಜ ಹೇಳಿದನು. "ಆದರೆ, ನಾನು ಹೇಗೆ ಘರ್ಜಿಸಬೇಕೆಂಬುದು ಗೊತ್ತಿಲ್ಲ." ಎಂದು ಮಗ ಹೇಳಿದನು. "ಪ್ರಯತ್ನಿಸು ಮಗನೇ, ಪ್ರಯತ್ನಿಸು." ಎಂದು ತಂದೆ ಸಿಂಹರಾಜ ಆಜ್ಞಾಪಿಸಿದನು.

ಆದರೆ ಮರಿಸಿಂಹ ಪ್ರತಿ ಬಾರಿ ಪ್ರಯತ್ನಿಸಿದಾಗಲೂ, ಕೇವಲ "ಮಿಯಾವ್!" ಅಂತ ಕೇಳಿಸುತ್ತಿತ್ತು. ಆದ್ದರಿಂದ, ಸಿಂಹರಾಜನು ತನ್ನ ಮಗನಿಗೆ ಘರ್ಜಿಸಲು ಕಲಿಸಬಲ್ಲ ಒಬ್ಬ ಗುರುವನ್ನು ನೇಮಿಸಲು ನಿರ್ಧರಿಸಿದನು.

ಮೊದಲ ಗುರು ಆನೆಚಿಕ್ಕಪ್ಪನು ಹೇಗೆ ಘೀಳಿಡಬೇಕು ಎಂಬುದನ್ನು ಕಲಿಸಲು ಪ್ರಯತ್ನಿಸಿದನು. ಮರಿಸಿಂಹ ಚೆನ್ನಾಗಿ ಕಲಿತನು. ಆದರೆ ತನ್ನ ಮಗ ಆನೆಯಂತೆ ಘೀಳಿಡುವುದನ್ನು ನೋಡಿ ಸಿಂಹರಾಜನಿಗೆ ಸಂತೋಷವಾಗಲಿಲ್ಲ. ಆದ್ದರಿಂದ, ಅವನು

ಆನೆಚಿಕ್ಕಪ್ಪನನ್ನು ಕಳುಹಿಸಿದನು.

ನಂತರ ಕತ್ತೆಚಿಕ್ಕಪ್ಪನನ್ನು ಕರೆದುಕೊಂಡು ಬಂದನು. ಕತ್ತೆಚಿಕ್ಕಪ್ಪನು ಹೇಗೆ ಕಿರಿಚಬೇಕೆಂದು ಕಲಿಸಿದನು. ಆದರೆ ತಂದೆ ಸಿಂಹರಾಜ ತನ್ನ ಮಗ ಕಿರುಚುವುದನ್ನು ನೋಡಲು ಇಷ್ಟಪಡಲಿಲ್ಲ. ಶೀಘ್ರದಲ್ಲೇ, ಕತ್ತೆಚಿಕ್ಕಪ್ಪನನ್ನು ಸಹ ಮರಳಿ ಕಳಿಸಿದ. ಈಗ, ಚಿಕ್ಕಮ್ಮ ಬೆಕ್ಕಿನ ಸರದಿ. ಚಿಕ್ಕಮ್ಮಗೆ ಮರಿಸಿಂಹವು ಈಗಾಗಲೇ “ಮಿಯಾಂವ್” ಎಂದು ಚೆನ್ನಾಗಿ ಹೇಳುತ್ತದೆ ಎಂಬುದು ಗೊತ್ತಿತ್ತು. ಇದರಿಂದ ಅವಳು ಕೂಡ ಹೊರಟುಹೋದಳು. ಇದರಿಂದ ತಂದೆಸಿಂಹರಾಜ ದುಃಖಿತನಾದನು.

ಒಂದು ದಿನ, ಒಬ್ಬ ಬೇಟೆಗಾರ ಕಾಡಿಗೆ ಬಂದನು. ಅವನನ್ನು ನೋಡಿ ಕಾಡಿನ ಎಲ್ಲಾ ಪ್ರಾಣಿ ಸ್ನೇಹಿತರು ತಮ್ಮ ಜೀವದ ರಕ್ಷಣೆಗಾಗಿ ಓಡುತ್ತಿರುವುದನ್ನು ನೋಡಿ, ಮರಿಸಿಂಹವು ತುಂಬಾ

ಬೇಸರಗೊಂಡಿತು. "ನಾನು ನಿಮ್ಮೆಲ್ಲರನ್ನೂ ರಕ್ಷಿಸುತ್ತೇನೆ." ಎಂದು ತನ್ನ ಎಲ್ಲಾ ಶಕ್ತಿಯನ್ನು ಒಟ್ಟುಗೂಡಿಸಿ ಜೋರಾಗಿ ಘರ್ಜಿಸಿತು. ಅದರ ಘರ್ಜನೆ ಎಷ್ಟು ಜೋರಾಗಿತ್ತೆಂದರೆ, ಬೇಟೆಗಾರನನ್ನೇ ಹೆದರಿಸಿ ಓಡಿಸಿತು. ತಂದೆಸಿಂಹರಾಜನಿಗೆ ಇದರಿಂದ ತುಂಬಾ ಸಂತೋಷವಾಯಿತು. ಮತ್ತು ಕೊನೆಗೂ ತನ್ನ ಮಗ ಘರ್ಜಿಸುವುದು ಕಲಿತ್ತಿದ್ದನ್ನು ನೋಡಿ ಹೆಮ್ಮೆಪಟ್ಟನು. *

**ಮನ ಮಂಥನ**

* ಮರಿಸಿಂಹ ಘರ್ಜಿಸುವುದನ್ನು ಕಲಿಯಲು ತಂದೆ ಸಿಂಹರಾಜ ಅನುಸರಿಸಿದ ಪ್ರಯತ್ನಗಳ ಮಹತ್ವವೇನು?

# Little Lion Learns To Roar[1]

- Shreya Sharmain



Deep in the jungle lived a Lion King with his family, his wife and his cute little son. Daddy lion was very fond[2] of his son. He

**ಹೊಸಪದಗಳು:**

1. **Roar** (ರಾರ್) - **ಘರ್ಜನೆ/ಆರ್ಭಟ**
2. **Fond** (ಫ಼ಾಂಡ್) - **ಅತಿಪ್ರೀತಿಯ/ಮುದ್ದಿನ**

hoped[3] that one day; his son would take over the King of the jungle. “Son, an important thing for a good King is his roar. You must learn how to roar,” daddy lion said. “But I don't know how to roar,” said his son. “Try, my son, try,” daddy lion commanded[4].

But every time baby lion tried, all he could do was “MEOW!” So, the Lion King decided to get his son a teacher who could teach him how to roar. The first teacher was Uncle

<u>**ಹೊಸಪದಗಳು:**</u>

**3 Hope** (ಹೋಪ್) - **ನಿರೀಕ್ಷೆ/ಭರವಸೆ/ಹಾರೈಕೆ**

**4. Command** (ಕಮಾಂಡ್)-**ಆಜ್ಞೆ /ಹುಕುಂ/ಆಜ್ಞಾಪನೆ**

Elephant. He tried teaching him how to trumpet[5]. Baby lion picked up well. But daddy lion was not happy to see his son trumpeting like an elephant. So, he sent Uncle Elephant away.

Then, he called up Uncle Donkey. He taught him how to bray[6] but daddy lion hated to see his son bray. Soon, Uncle Donkey had also turned away. Now, it was Aunt Cat's turn. Aunt found[7] that baby lion could already say Meow very well and she went

**ಹೊಸಪದಗಳು:**

5. **Trumpet** (ಟ್ರಂಪಿಟ್) - **ಕಹಳೆ/ತುತೂರಿ**
6. **Bray** (ಬ್ರೇ) - **ಕತ್ತೆಯ ಕರ್ಕಶ ಧ್ವನಿ**
7. **Found** (ಫ಼ೌಂಡ್) - **ಪ್ರತಿಷ್ಠಾಪಿಸು**

away, too. Daddy lion became sad. He gave up all hopes of his son's roaring.

Then, one day, a hunter[8] came to the forest. Seeing his animal friends running for their lives, baby lion became very upset. "I will save you all. After all, I am the future King!" he shouted[9]. Saying that he gathered[10] all his strength[11] to roar. The roar was so loud that he scared[12] the hunter away. Daddy

<u>**ಹೊಸಪದಗಳು:**</u>

**8. Hunter** (ಹಂಟರ್) - **ಬೇಟೆಗಾರ**

**9. Shout** (ಷೌಟ್)- **ಗಟ್ಟಿಯಾಗಿ ಕೂಗು/ಅರಚು/ಕಿರಚು**

**10. Gather** (ಗ್ಯಾದರ್) - **ಒಟ್ಟಿಗೆ ಸೇರಿಸು/ಶೇಖರಿಸು**

**11. Strength** (ಸ್ಟ್ರೆಂತ್) - **ಬಲ/ಶಕ್ತಿ/ತಾಕತ್ತು**

**12. Scare** (ಸ್ಕೇಅರ್) - **ಭಯ/ಗಾಬರಿ/ಹೆದರಿಕೆ/ಭೀತಿ**

lion felt very happy and he was proud of his son. Finally, his son learned how to roar. *

**ಮೂಲ: https://bedtimeshortstories.com/little-lion-learns-to-roar**

ಕವನ

# ರೆಕ್ಕೆ ಕಟ್ಟಿ ಹಾರುವೆ





ನನ್ನಯ ತೋಳಿಗೆ ರೆಕ್ಕೆಯ ಕಟ್ಟಿ
ನೀಲಾಗಸದೊಳು ಹಾರುವೆನು.
ಪಟ ಪಟ ರೆಕ್ಕೆ ಬಡಿಯುತಲಿ
ಮೇಲಕೆ ಮೇಲಕೆ ಏರುವೆನು.

ಹಣ್ಣಿನ ತೋಟಕೆ ಲಗ್ಗೆಯ ಹಾಕಿ
ಮನದಣಿ ಮೆಲ್ಲುತ ಕುಣಿಯುವೆನು.
ನದಿ–ಸರೋವರ, ಬೆಟ್ಟ–ಕಾಡುಗಳ
ಚೆಲುವನು ಕಾಣುತ ನಲಿಯುವೆನು.

ಹಸಿರಿನ ಗಿಡ ಮರ ಏರಿ ಕುಳಿತು
ನಸುನಗೆ ಬೀರುತ ಹಾಡುವೆನು.
ಸುಂದರ ಸೃಷ್ಟಿಯ ವಿಸ್ಮಯಗಳನು
ಬೆಕ್ಕಸ ಬೆರಗಾಗಿ ನೋಡುವೆನು.

ಧ್ವನಿ ಶೈ.ಸಂ.ಕೇಂದ್ರ/ಆ.ಯೋ/ಸಾಹಿತ್ಯ ಮಂಟಪ/ಪುಟ–೪೨

ಊರಿನ ಎಲ್ಲಾ ಗೆಳೆಯರ ಬಳಗಕೆ
ಸವಿ ಸವಿ ಅನುಭವ ಹೇಳುವೆನು.
ಜೊತೆಯಲಿ ನೀವು ಬರುವಿರೇನು
ಎನ್ನುತ ಪ್ರೀತಿಯಲಿ ಕೇಳುವೆನು.

ಪಕ್ಷಿ ಸಂಕುಲದ ಸ್ನೇಹವ ಬೆಳೆಸಿ
ಅವುಗಳ ಕೌತುಕ ತಿಳಿಯುವೆನು.
ಅಪ್ಪ–ಅವ್ವನ ನೆನಪಾದ ಕೂಡಲೆ
ನಮ್ಮನೆ ಮುಂದೆ  ಇಳಿಯುವೆನು.

**– ವೀರೇಶ ಬ. ಕುರಿ**
**ಸೋಂಪೂರ, ಶಿಕ್ಷಕರು,**
**ಸ.ಹಿ.ಪ್ರಾ.ಶಾಲೆ, ಚಂಡೂರು**
**ಕೊಪ್ಪಳ ಜಿಲ್ಲೆ**

‘ಧ್ವನಿ’ ಶೈಕ್ಷಣಿಕ ಯೋಜನೆಗಳ ವ್ಯಾಪ್ತಿಯಲ್ಲಿ
ಉಚಿತ ಹಂಚಿಕೆಗಾಗಿ

**ಸಂಪರ್ಕ ಮಾಹಿತಿ:**
**ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ**
**# 76,‘ಪುಷ್ಪಾಂಜಲಿ’ 3ನೇ ಅಡ್ಡರಸ್ತೆ,**
**ಶಿವಗಿರಿ, ಧಾರವಾಡ 580 007**
**ಮೊ: 99866 61055**

**dhwanitrust@gmail.com**
**www. dhwanitrust.org**

ಗಮನಿಸಿ: ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರವುದು ಅಪೇಕ್ಷಣೀಯ.